**ಭಾರತಕ್ಕೆ ಗೌರವಾನ್ವಿತ ಭೂತಾನ್ ರಾಜರ ಭೇಟಿ (ಫೆಬ್ರವರಿ 03-04, 2025)**

ಫೆಬ್ರುವರಿ 04, 2025

ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರ ಆಹ್ವಾನದ ಮೇರೆಗೆ, ಭೂತಾನ್‌ನ ರಾಜ, ಗೌರವಾನ್ವಿತ ಜಿಗ್ಮೆ ಖೇಸರ್ ನಾಮ್‌ಗ್ಯೆಲ್ ವಾಂಗ್‌ಚುಕ್ ಅವರು ಮಹಾ ಕುಂಭಮೇಳದಲ್ಲಿ ಭಾಗವಹಿಸಲು ಭಾರತಕ್ಕೆ ವಿಶೇಷ ಭೇಟಿ ನೀಡಿದರು.

2. ಗೌರವಾನ್ವಿತ ಭೂತಾನ್ ರಾಜರ ಭೇಟಿಯ ಸಂದರ್ಭದಲ್ಲಿ, ಉತ್ತರ ಪ್ರದೇಶದ ಘನತೆವೆತ್ತ ರಾಜ್ಯಪಾಲರಾದ ಶ್ರೀಮತಿ ಆನಂದಿಬೆನ್ ಪಟೇಲ್ ಅವರು ರಾಜರ ಗೌರವಾರ್ಥ ಭೋಜನ ಕೂಟವನ್ನು ಏರ್ಪಡಿಸಿದ್ದರು. ಉತ್ತರ ಪ್ರದೇಶದ ಮುಖ್ಯಮಂತ್ರಿ ಶ್ರೀ ಯೋಗಿ ಆದಿತ್ಯನಾಥ್ ಅವರು ಗೌರವಾನ್ವಿತ ಭೂತಾನ್ ರಾಜರನ್ನು ಭೇಟಿ ಮಾಡಿದರು ಮತ್ತು ಅವರೊಂದಿಗೆ ಪ್ರಯಾಗರಾಜ್‌ಗೆ ಪ್ರಯಾಣ ಬೆಳೆಸಿದರು.

3. ಭಾರತ ಮತ್ತು ಭೂತಾನ್ ಸ್ನೇಹ ಮತ್ತು ಸಹಕಾರದ ವಿಶೇಷ ಬಾಂಧವ್ಯವನ್ನು ಆನಂದಿಸುತ್ತವೆ ಹಾಗೂ ಇದು ಪರಸ್ಪರ ತಿಳಿವಳಿಕೆ ಮತ್ತು ನಂಬಿಕೆಯ ಆಧಾರದಲ್ಲಿ ರಚಿಸಲ್ಪಟ್ಟಿದೆ. ಗೌರವಾನ್ವಿತ ಭೂತಾನ್ ರಾಜರ ಭೇಟಿಯು ಭಾರತ ಮತ್ತು ಭೂತಾನ್ ನಡುವಿನ ಎಂದಿನ ಉನ್ನತ ಮಟ್ಟದ ವಿನಿಮಯದ ಸಂಪ್ರದಾಯಕ್ಕೆ ಅನುಗುಣವಾಗಿದೆ ಹಾಗೂ ವಿಶೇಷ ಪಾಲುದಾರಿಕೆಯ ಪ್ರಮುಖ ಲಕ್ಷಣವಾಗಿದೆ.

ನವದೆಹಲಿ

ಫೆಬ್ರುವರಿ 04, 2025